ಗುಂಡ: ಇವತ್ತು ಫೇಸ್ ಬುಕ್‌ನಿಂದಾಗಿ ದೊಡ್ಡ ಅನಾಹುತವೊಂದರಿಂದ ಬಚಾವಾದೆ ಕಣಯ್ಯಾ.

ಗೆಳೆಯ: ಹೌದೆ, ಅಂಥಾದ್ದೇನು ಅನಾಹುತ?

ಗುಂಡ: ಇವತ್ತು ನನ್ನ ಹೆಂಡತಿಯ ಬರ್ತ್‌ಡೇ ಇತ್ತು, ನೆನಪೇ ಇರಲಿಲ್ಲ... ಫೇಸ್‌ಬುಕ್ ನೆನಪಿಸಿತು!

★★★

ಗುಂಡ: ಎಲ್ಲಿ ಹೋಗುತ್ತಿರುವೆ ನೀನು?

ಪತ್ನಿ: ಕಾಣಿಸುತ್ತಿಲ್ಲವೆ, ಸ್ನಾನಕ್ಕೆ ಹೋಗುತ್ತಿದ್ದೇನೆ.

ಗುಂಡ: ಆದರೆ, ಮೊಬೈಲ್ ಜೊತೆಗಿದೆ?

ಪತ್ನಿ: ಮತ್ತೆ ಬಕೆಟ್ ತುಂಬುವವರೆಗೆ ನಾನೇನು ಮಾಡಲಿ?

★★★

ಮಹಿಳಾ ಪ್ರಯಾಣಿಕರಿಂದ ತುಂಬಿದ್ದ ಬಸ್ಸೊಂದು ಪಲ್ಟಿಯಾಗಿ ಪ್ರಯಾಣಿಕರೆಲ್ಲಾ ಅಸುನೀಗಿದರು. ಸುದ್ದಿ ತಿಳಿದ ಅವರ ಪತಿಯಂದಿರು ಒಂದೊಂದು ಗಂಟೆ ಅತ್ತರು. ಆದರೆ ಗುಂಡ ಮಾತ್ರ ಎರಡು ಗಂಟೆ ಅತ್ತ. ಏಕೆ ಗೊತ್ತೆ?

ಏಕೆಂದರೆ ಗುಂಡನ ಪತ್ನಿಗೆ ಆ ಬಸ್ಸು ಮಿಸ್ ಆಗಿತ್ತು!

★★★

ಗುಂಡನ ಪತ್ನಿ: ಲಲಿತಮ್ಮನವರೇ, ನಮ್ಮ ಮನೆಯವರು ಈಗ ತಾನೇ ಮನೆಗೆ ಬಂದಿದ್ದಾರೆ, ಸ್ವಲ್ಪ ನಿಮ್ಮ ಲಟ್ಟಣಿಗೆ ಕೊಡ್ತೀರಾ?

ಲಲಿತಮ್ಮ: ಸರಿ ಕಣ್ರೀ, ತಗೊಳ್ಳಿ. ಆದರೆ ಬೇಗನೇ ಹಿಂತಿರುಗಿಸಿ. ನಮ್ಮವರೂ ಇನ್ನೇನು ಬಂದುಬಿಡುತ್ತಾರೆ.

ಹೆಂಡತಿಯರಿಗೆ ತಮ್ಮ ತಮ್ಮ ಪತಿಯಂದಿರಿಗೆ ಬಿಸಿ ಬಿಸಿ ಚಪಾತಿ ತಿನ್ನಿಸುವ ಕಾಳಜಿಯೇ ಹೊರತು ಅನ್ಯಥಾ ಭಾವಿಸಬೇಡಿ ಎನ್ನುವುದು ಗುಂಡನ ವಿನಂತಿ.

★★★

ನಲ್ವತ್ತರ ಹರೆಯ ತಲುಪಿದಾಗ, ತನ್ನ ಬಳಿಯಲ್ಲೊಂದು ಬಂಗಲೆಯಿರಬೇಕು, ಒಂದು ಕಾರು ಇರಬೇಕು ಮತ್ತು ಒಂದು ಒಳ್ಳೆ ಬ್ಯುಸಿನೆಸ್ ಹೊಂದಿರಬೇಕು ಎನ್ನುವುದು ಅವನ ಕನಸು.

ಅವುಗಳಲ್ಲಿ ಕೊನೆಯ ಪಕ್ಷ ಒಂದು ಕನಸೀಗ ನನಸಾಗಿದೆ... ಆತನಿಗೀಗ ನಲ್ವತ್ತರ ಹರೆಯ!

**(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ**



ಗುಂಡ: ನಿನ್ನೆ ರಾತ್ರಿ ನನ್ನ ಹೆಂಡತಿ ನನ್ನ ಪರ್ಸನ್ನೆಲ್ಲ ತಡಕಾಡಿದಳು.

ಗೆಳೆಯ: ಏನಾದರೂ ಸಿಕ್ಕಿತಾ?

ಗುಂಡ: ಸಿಕ್ಕದೇ ಏನು? ಒಂದು ಭಾಷಣ ಬಿಗಿಯೋಕೆ ಎಷ್ಟು ಬೇಕೋ ಅಷ್ಟೂ ಸಿಕ್ಕಿತು.

★★★

ರಾಗಿಣಿ: ನನ್ನ ಗಂಡ ನಮ್ಮ ಮದುವೆಯಾದ ಮೂರು ತಿಂಗಳೊಳಗೇ ತೀರಿಕೊಂಡುಬಿಟ್ಟರು.

ಅಂಬುಜಮ್ಮ: ನಿಜಕ್ಕೂ ಪುಣ್ಯವಂತರು. ಪುಣ್ಯಾತ್ಮ ಹೆಚ್ಚು ಕಾಲ ನರಳಲಿಲ್ಲ.

★★★

ಉಪಾಧ್ಯಾಯರು: ಯಾಕೋ ಗುಂಡ ಹೋಂವರ್ಕ್ ಮಾಡಿಲ್ಲ? ಚಡ್ಡಿ ಬಿಚ್ಚಲಾ?

ಗುಂಡ: ಬೇಡ ಗುರುಗಳೇ! ತಪ್ಪುನಂದೇ. ಅದಕ್ಕೆ ನೀವ್ಯಾಕೆ ಚಡ್ಡಿ ಬಿಚ್ತೀರಾ?

**(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು**

ಪತಿ: ಇದೆಂಥ ಸಾರು ಮಾಡಿರುವೆ, ಇದರಲ್ಲಿ ಹುಳಿ, ಉಪ್ಪು, ಖಾರ ಏನೂ ಇಲ್ಲ. ಇತ್ತೀಚೆಗೆ ನಿನ್ನ ಗಮನವೆಲ್ಲ ಬರೀ ಮೊಬೈಲ್‌ನಲ್ಲೇ ಇರುತ್ತಿದೆ. ಸ್ವಲ್ಪ ಅಡುಗೆಯ ಕಡೆಗೆ ಗಮನ ಕೊಡು.

ಪತ್ನಿ: ರೀ ಮೊದಲು ನೀವು ಮೊಬೈಲ್ ಅನ್ನು ಪಕ್ಕದಲ್ಲಿಟ್ಟುಕೊಂಡು ಊಟ ಮಾಡುವುದನ್ನು ನಿಲ್ಲಿಸಿ. ಅಷ್ಟೊತ್ತಿನಿಂದ ನೋಡುತ್ತಿದ್ದೇನೆ. ರೊಟ್ಟಿಯನ್ನು ನೀರಿನಲ್ಲಿ ಅದ್ದಿಕೊಂಡು ತಿನ್ನುತ್ತಿದ್ದೀರಿ.

★★★

ಗುಂಡ ತನ್ನ ಮ್ಯಾರೇಜ್ ಸರ್ಟಿಫಿಕೇಟನ್ನು ತುಂಬ ಹೊತ್ತಿನಿಂದ ಒಂದೇ ಸಮನೆ ನೋಡುತ್ತಿದ್ದ.

'ಅಷ್ಟೊತ್ತಿನಿಂದ ಅದೇನನ್ನು ಹುಡುಕುತ್ತಿದ್ದೀರಾ ಅದರಲ್ಲಿ?' ಎಂದು ಪತ್ನಿ ಕೇಳಿದಳು.

'ಇದರಲ್ಲಿ ಎಕ್ಸಪೈರಿ ಡೇಟ್ ಎಲ್ಲಿದೆ ಅಂತ ಹುಡುಕುತ್ತಿದ್ದೇನೆ' ಎಂದ ಗಂಡ.

★★★

ಒಬ್ಬ ಕುಡುಕ ಮಾಳಿಗೆಯಿಂದ ಕೆಳಗೆ ಬಿದ್ದ. ಜನ ಜಮಾಯಿಸಿದರು. ಏನಾಯಿತು? ಹೇಗಾಯಿತು? ಎಂದು ಕೇಳತೊಡಗಿದರು.

'ನನಗೂ ಗೊತ್ತಿಲ್ಲ ನಾನು ಈಗ ತಾನೆ ಮೇಲಿನಿಂದ ಕೆಳಗೆ ಬಂದಿದ್ದೇನೆ' ಎಂದ ಕುಡುಕ.

★★★

ತನ್ನ ಗೆಳೆಯನ ಕೈಯಲ್ಲಿದ್ದ ಹೊಸ ಫೋನನ್ನು ಕಂಡು ಗೋಪಿ ಕೇಳಿದ 'ಯಾವಾಗ ಕೊಂಡೆ ಹೊಸ ಫೋನನ್ನು?'

'ನಾನು ಕೊಂಡಿದ್ದಲ್ಲ ನನ್ನ ಗರ್ಲ್ ಫ್ರೆಂಡಿನದು' ಎಂದ ಗೆಳೆಯ.

'ಗರ್ಲ್ ಫ್ರೆಂಡ್ ಫೋನನ್ನು ಏಕೆ ತೆಗೆದುಕೊಂಡು ಬಂದೆ?' ಗೋಪಿ ಮತ್ತೆ ಕೇಳಿದ.

'ನನ್ನ ಫೋನನ್ನು ಏಕೆ ಎತ್ತುವುದಿಲ್ಲ ಎಂದು ಅವಳು ದಿನಾ ಹೇಳುತ್ತಿದ್ದಳು. ಅದ್ದರಿಂದ ಇವತ್ತು ಎತ್ತಿಕೊಂಡು ಬಂದೆ' ಎಂದ ಗೆಳೆಯ.

★★★

ಪ್ರಶ್ನೆ: ಗುಳಿಗೆಗಳ ಒಂದು ಸ್ಟ್ರಿಪ್‌ನಲ್ಲಿ ಹತ್ತು ಗುಳಿಗೆಗಳೇ ಏಕೆ ಇರುತ್ತವೆ?

ಉತ್ತರ: ಬಹುಶಃ ಈ ಪದ್ಧತಿ ರಾವಣನ ಕಾಲದಿಂದ ಆರಂಭವಾಗಿರಬೇಕು!

**(ಸಂಗ್ರಹ) ಮುರಳೀಧರ ಕುಲಕರ್ಣಿ, ಬೀದರ್**